ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-5, March - April 2026, Pp. 40-48
©*IIMRD*, Mysuru
IIMRD JOURNALS
www.iimrd.com

# ರೈತನೆಂಬ ಸಭಾಲ್ಟರನ್: ಒಂದು ಐತಿಹಾಸಿಕ ಅಧ್ಯಯನ

**ಮಧುಸೂಧನ್ ಸಿ[1] ಮತ್ತು ಡಾ.ಎಸ್.ನಾಗರತ್ನಮ್ಮ[2]**
[1]ಸಂಶೋಧನಾ ವಿದ್ಯಾರ್ಥಿ, [2]ಹಿರಿಯ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**ಸಾರಾಂಶ: (Abstract)**

*ಈ ಲೇಖನವು ಭಾರತೀಯ ಇತಿಹಾಸದ ಸಂದರ್ಭದಲ್ಲಿ ರೈತಾಪಿ ವರ್ಗವನ್ನು 'ಸಭಾಲ್ಟರನ್' ಅಥವಾ ಕೆಳಹಂತದ ರಾಜಕೀಯ ಪ್ರಜ್ಞೆಯುಳ್ಳ ಸಮುದಾಯವಾಗಿ ಗುರುತಿಸುವ ಐತಿಹಾಸಿಕ ವಿಶ್ಲೇಷಣೆಯನ್ನು ಮಾಡುತ್ತದೆ. ಸಾಂಪ್ರದಾಯಿಕ ಮತ್ತು ಮಾರ್ಕ್ಸ್‌ವಾದಿ ಇತಿಹಾಸ ಲೇಖನಗಳಲ್ಲಿ ರೈತ ಚಳವಳಿಗಳನ್ನು ಹೆಚ್ಚಾಗಿ ಗಣ್ಯರ ನಾಯಕತ್ವದ ಅಥವಾ ಬಾಹ್ಯ ಪ್ರಭಾವದ ಫಲವಾಗಿ ನೋಡಲಾಗುತ್ತಿತ್ತು. ಆದರೆ, ಈ ಅಧ್ಯಯನವು ರಣಜಿತ್ ಗುಹಾ ಅವರಂತಹ ಚಿಂತಕರು ಪ್ರತಿಪಾದಿಸಿದ 'ಸಭಾಲ್ಟರನ್ ಸ್ಟಡೀಸ್' ಹಿನ್ನೆಲೆಯಲ್ಲಿ, ರೈತ ಸಮುದಾಯವು ತನ್ನದೇ ಆದ ಸ್ವತಂತ್ರ ರಾಜಕೀಯ ಚಿಂತನೆ ಹಾಗೂ ಪ್ರತಿರೋಧದ ಸ್ವರೂಪವನ್ನು ಹೇಗೆ ಹೊಂದಿತ್ತು ಎಂಬುದನ್ನು ಚರ್ಚಿಸುತ್ತದೆ. ಅಧ್ಯಯನವು ಮುಖ್ಯವಾಗಿ ವಸಾಹತುಶಾಹಿ ಕಾಲಘಟ್ಟದಲ್ಲಿ ರೈತರು ನಡೆಸಿದ ಹೋರಾಟಗಳನ್ನು ಕೇವಲ ಆರ್ಥಿಕ ಅಸಮಾಧಾನದ ದೃಷ್ಟಿಯಿಂದ ನೋಡದೆ, ಅದನ್ನು ಅವರ ಘನತೆ ಮತ್ತು ಸ್ವಾಯತ್ತತೆಯ ರಕ್ಷಣೆಗಾಗಿ ನಡೆದ ಸಂಘಟಿತ ಪ್ರಯತ್ನಗಳೆಂದು ವಿಶ್ಲೇಷಿಸುತ್ತದೆ. ವಿಶೇಷವಾಗಿ ಕರ್ನಾಟಕದ ಪ್ರಾದೇಶಿಕ ಇತಿಹಾಸದಲ್ಲಿನ ರೈತ ದಂಗೆಗಳು ಮತ್ತು ಅವುಗಳ ಹಿಂದಿದ್ದ ಸಭಾಲ್ಟರನ್ ಚೈತನ್ಯವನ್ನು ಈ ಪ್ರಬಂಧವು ಕೇಂದ್ರೀಕರಿಸುತ್ತದೆ.*

**ಮುಖ್ಯಪದಗಳು (Keywords):** *ಸಭಾಲ್ಟರನ್, ರೈತ ಪ್ರಜ್ಞೆ, ಇತಿಹಾಸ ರಚನಾ ಶಾಸ್ತ್ರ, ಪ್ರತಿರೋಧದ ಸಂಸ್ಕೃತಿ, ಕರ್ನಾಟಕದ ರೈತ ಹೋರಾಟಗಳು.*

**ಪೀಠಿಕೆ**

***ರೈತರಣ್ಣ ರೈತರು ಇವರು ನಮ್ಮ ರೈತರು***
***ಕನಸು ಕಂಡು ಹಸಿವನ್ನುಂಡು ಅನ್ನದಾತರಾದರು***
***ಊಳಿಗದ ಉಸಿರಲ್ಲಿ ಹಸಿರನ್ನ ಬೆಳೆದವರು/***
***ಭೂಮಿಯ ಬೆವರಲ್ಲಿ ಬದುಕನ್ನು ಬರೆದವರು***
***ಇಡಿಯಲ್ಲಿ ತೆಗೆದ ಬೆಳೆಯನ್ನು ದೇಶಕ್ಕೆ ಹಂಚಿದರು***
***ರೈತರಣ್ಣ ರೈತರು ಇವರು ನಮ್ಮ ರೈತರು//***

*Please cite this article as:* ಮಧುಸೂಧನ್ ಸಿ ಮತ್ತು ಎಸ್.ನಾಗರತ್ನಮ್ಮ. (2026). ರೈತನೆಂಬ ಸಭಾಲ್ಟರನ್: ಒಂದು ಐತಿಹಾಸಿಕ ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(5). ಪು.ಸಂ.* 40–48

ಬರಗೂರು ರಾಮಚಂದ್ರಪ್ಪ ರವರ ಈ ಪದ್ಯವು ರೈತನ ಜೀವನದ ಮೌಲ್ಯ, ತ್ಯಾಗ ಮತ್ತು ಪರಿಶ್ರಮವನ್ನು ಆಳವಾಗಿ ಪ್ರತಿಬಿಂಬಿಸುತ್ತದೆ. ರೈತನು ನಮ್ಮ ಸಮಾಜದ ಆಧಾರಸ್ತಂಭವಾಗಿದ್ದು, ಅವನ ಜೀವನ ನಮ್ಮ ಬದುಕಿನೊಂದಿಗೆ ನೇರವಾಗಿ ಸಂಬಂಧ ಹೊಂದಿದೆ. ತನ್ನ ಕನಸುಗಳಿದ್ದರೂ, ತನ್ನ ಹಸಿವನ್ನೇ ಮರೆತು ಇತರರ ಹೊಟ್ಟೆ ತುಂಬಿಸುವ ಮಹತ್ವದ ಪಾತ್ರವನ್ನು ರೈತನು ನಿಭಾಯಿಸುತ್ತಾನೆ. ರೈತನು ತನ್ನ ಉಸಿರು ಮತ್ತು ಶ್ರಮವನ್ನು ಬೆಳೆಗಳಿಗೆ ಅರ್ಪಿಸಿ, ಪ್ರಕೃತಿಯೊಂದಿಗೆ ಒಂದಾಗಿ ಬದುಕುವ ವ್ಯಕ್ತಿಯಾಗಿ, ಭೂಮಿಯ ಮೇಲೆ ಬೀಳುವ ಅವನ ಬೆವರಿನ ಹನಿಗಳು ಸಮಾಜದ ಬದುಕನ್ನು ಕಟ್ಟಿಕೊಡುವ ಅಮೂಲ್ಯ ಶಕ್ತಿ. ತನ್ನ ಕೈಯಲ್ಲಿ ಬೆಳೆದ ಬೆಳೆಯನ್ನು ದೇಶದ ಜನತೆಗೆ ಹಂಚುವ ಮೂಲಕ ರೈತನು ನಿಜವಾದ ಅನ್ನದಾತನಾಗುತ್ತಾನೆ. ರೈತನ ಜೀವನದಲ್ಲಿ ತ್ಯಾಗ, ಪರಿಶ್ರಮ ಮತ್ತು ಮಾನವೀಯತೆ ಎಂಬ ಮೌಲ್ಯಗಳು ಸ್ಪಷ್ಟವಾಗಿ ಕಾಣಿಸುತ್ತವೆ.

ಚರಿತ್ರೆಯ ಪುಟಗಳಲ್ಲಿ ರೈತ ಕೇವಲ ಆಹಾರದ ಉತ್ಪಾದಕನಾಗಿ ಮಾತ್ರವಲ್ಲದೆ, ವ್ಯವಸ್ಥೆಯ ತುಳಿತಕ್ಕೆ ಒಳಗಾದ 'ಸಭಾಲ್ಟರನ್' (Subaltern) ಅಥವಾ ಅಧೀನ ಶಕ್ತಿಯಾಗಿ ಕಾಣಿಸಿಕೊಳ್ಳುತ್ತಾನೆ. ಆಂಟೋನಿಯೊ ಗ್ರಾಮ್ಶಿಯ ಪರಿಕಲ್ಪನೆಯಂತೆ, ಅಧಿಕಾರ ರಚನೆಯ ಹೊರಗಿರುವ ಮತ್ತು ಸದಾ ಶೋಷಣೆಗೆ ಒಳಗಾಗುವ ವರ್ಗವೇ ಸಭಾಲ್ಟರನ್. ಭಾರತೀಯ ಸಂದರ್ಭದಲ್ಲಿ ರೈತ ಸಮುದಾಯವು ಪ್ರಾಚೀನ ಕಾಲದಿಂದ ಇಂದಿನವರೆಗೂ ಹೇಗೆ ಈ ಹಂತಕ್ಕೆ ತಲುಪಿತು ಮತ್ತು ರಾಜಕೀಯ ಬದಲಾವಣೆಗಳು ಅವರ ಮೇಲೆ ಬೀರಿದ ಪರಿಣಾಮಗಳೇನು ಎಂಬುದನ್ನು ಐತಿಹಾಸಿಕ ದೃಷ್ಟಿಕೋನದಿಂದ ವಿಶ್ಲೇಷಿಸುವುದು ಅಗತ್ಯವಾಗಿದೆ.[1]

ಪ್ರಾಚೀನ ಭಾರತದಲ್ಲಿ ಭೂಮಿಯು ಸಮುದಾಯದ ಸೊತ್ತಾಗಿದ್ದರೂ, ಮನುಸ್ಮೃತಿಯಂತಹ ಧರ್ಮಶಾಸ್ತ್ರಗಳ ಉಗಮದೊಂದಿಗೆ 'ಬಲಿ' ಅಥವಾ ತೆರಿಗೆಯ ವ್ಯವಸ್ಥೆ ಕಟ್ಟುನಿಟ್ಟಾಯಿತು. ರೈತನನ್ನು "ಕೃಷಕ", "ಹಲಿಕ", "ಕರ್ಷಕ", "ಉಳುವ", "ಭೂಮಿಪುತ್ರ" ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿತ್ತು. ವೇದಿಕ ಸಾಹಿತ್ಯದಲ್ಲಿ "ಕರ್ಷಕ" ಎಂಬ ಪದವು ಭೂಮಿಯನ್ನು ಒಡೆಯುವವನಿಗೆ ಬಳಕೆಯಾಗಿದ್ದು, ನಂತರದ ಕಾಲದಲ್ಲಿ "ಕೃಷಿಕ" ಎಂಬ ಪದ ಸಾಮಾನ್ಯವಾಯಿತು. ಕೃಷಿ ಆರ್ಥಿಕತೆಯ ಕೇಂದ್ರವಾಗಿದ್ದರೂ ರೈತರು ಸ್ವಾಮ್ಯ ಮತ್ತು ಅಧಿಕಾರದಿಂದ ದೂರವಿದ್ದರು. ಭೂಮಿ ರಾಜನ ಅಥವಾ ಧಾರ್ಮಿಕ ಸಂಸ್ಥೆಗಳ ನಿಯಂತ್ರಣದಲ್ಲಿದ್ದು, ರೈತರು ಉತ್ಪಾದಕರಾಗಿದ್ದರೂ ಸ್ವಾಮ್ಯವಿಲ್ಲದವರಾಗಿದ್ದರು. ಧರ್ಮಶಾಸ್ತ್ರಗಳು ಸಾಮಾಜಿಕ ಹಿರಿಮೆ–ಅಧಮತೆಯನ್ನು ದೃಢಪಡಿಸಿ, ರೈತರನ್ನು ಕೆಳಮಟ್ಟದ ವರ್ಗದಲ್ಲಿ ಸ್ಥಾಪಿಸಿದವು. ತೆರಿಗೆ ಮತ್ತು ಬಲವಂತದ ಸೇವೆಗಳ ಮೂಲಕ ಅವರು ರಾಜಕೀಯ ವ್ಯವಸ್ಥೆಗೆ ಒಳಪಟ್ಟರು. ಈ ಸ್ಥಿತಿಯಲ್ಲಿ ರೈತರು ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗದೆ, ತಮ್ಮ ಜೀವನದ ಮೇಲೆ ಸಂಪೂರ್ಣ ನಿಯಂತ್ರಣ ಕಳೆದುಕೊಂಡರು. ಇದರಿಂದಲೇ ಅವರು ಸಭಾಲ್ಟರನ್ ಹಂತದತ್ತ ಸಾಗಿದರು. ಮೌರ್ಯರ ಕಾಲದಲ್ಲಿ ರಾಜ್ಯವು ಕೃಷಿಯ ಮೇಲೆ ನಿಯಂತ್ರಣ ಸಾಧಿಸಲು ಶುರುಮಾಡಿತು. ಆದರೆ ರೈತ ನಿಜವಾದ ಅಧೀನ ಸ್ಥಿತಿಗೆ ತಲುಪಿದ್ದು ಸಾಮಂತಶಾಹಿ (Feudalism) ಪದ್ಧತಿಯ ಉದಯದೊಂದಿಗೆ. ಭೂಮಿಯ

[1] Ranajit Guha (1983). *The elementary aspects of peasant insurgency in colonial India*. Oxford University Press.

ಮಾಲೀಕತ್ವವು ಕೆಲವೇ ಕೆಲವು ಮೇಲ್ವರ್ಗದವರ ಪಾಲಾಗಿ, ರೈತ ಕೇವಲ ಗೇಣಿದಾರ ಅಥವಾ ಜೀತದಾಳಾಗಿ ಬದಲಾದನು. ಮೌರ್ಯ ಮತ್ತು ಗುಪ್ತ ಕಾಲಘಟ್ಟಗಳಲ್ಲಿ ಅವನು ಉತ್ಪಾದಕ ವರ್ಗದ ಅವಿಭಾಜ್ಯ ಅಂಗವಾಗಿದ್ದರೂ, ವರ್ಣವ್ಯವಸ್ಥೆಯ ಅಡಿಯಲ್ಲಿ ಶೂದ್ರ ವರ್ಗಕ್ಕೆ ಸೇರಿದವನಾಗಿ ಪರಿಗಣಿಸಲ್ಪಟ್ಟನು. "ಗಹಪತಿ" (Gahapati) ಎಂಬ ಪದವು ಕೆಲವೆಡೆ ಭೂಸ್ವಾಮ್ಯ ಹೊಂದಿದ ಕೃಷಿಕನನ್ನು ಸೂಚಿಸಿದರೂ, ಬಹುಪಾಲು ರೈತರು ಸಣ್ಣ ಭೂಧಾರಕರಾಗಿದ್ದು, ರಾಜ್ಯಕ್ಕೆ ತೆರಿಗೆ ನೀಡುವ ಬಾಧ್ಯತೆಯಲ್ಲಿದ್ದರು. [2] ಮಧ್ಯಕಾಲೀನ ಭಾರತದಲ್ಲಿ ರೈತನಿಗೆ ನೀಡಲಾದ ಹೆಸರುಗಳು ಅವನ ಅಧೀನಸ್ಥಿತಿಯನ್ನು ಇನ್ನಷ್ಟು ಸ್ಪಷ್ಟಪಡಿಸುತ್ತವೆ. ದೆಹಲಿ ಸುಲ್ತಾನರು ಮತ್ತು ಮುಘಲ್ ಆಡಳಿತದ ಕಾಲದಲ್ಲಿ ರೈತನನ್ನು "ರಯ್ಯತ್" (Ryot), "ಮುಜಾರಿಯಾ", "ಖುದ್ದಕಷ್ಟ", "ಪೈಕಾಸ್ತ" ಮುಂತಾದ ಪದಗಳಿಂದ ಕರೆಯಲಾಗುತ್ತಿತ್ತು. "ರಯ್ಯತ್" ಎಂಬ ಪದವೇ ಮೂಲತಃ "ಆಡಳಿತದ ಅಧೀನದಲ್ಲಿರುವ ಪ್ರಜೆ" ಎಂಬ ಅರ್ಥವನ್ನು ಹೊತ್ತುಕೊಂಡಿದೆ. ಇದು ರೈತನ ಸ್ವಾಯತ್ತತೆಯ ಕೊರತೆಯನ್ನು ಸೂಚಿಸುತ್ತದೆ. ಜಮೀನ್ದಾರಿ ಮತ್ತು ಜಾಗೀರ್ದಾರಿ ವ್ಯವಸ್ಥೆಗಳ ಬೆಳವಣಿಗೆಯಿಂದ ರೈತನು ಭೂಮಿಯ ನೈಜ ಮಾಲೀಕತ್ವವನ್ನು. ಕಳೆದುಕೊಂಡು, ಜಮೀನ್ದಾರರ ಅಧೀನದಲ್ಲಿ ಕೆಲಸ ಮಾಡುವವನಾಗಿ ರೂಪುಗೊಂಡನು."ಖುದ್ದಕಷ್ಟ" ಎಂದರೆ ಸ್ವತಃ ತನ್ನ ಭೂಮಿಯನ್ನು ಬೆಳೆಸುವವನು, ಆದರೆ "ಪೈಕಾಸ್ತ" ಎಂದರೆ ಬಾಡಿಗೆಗೆ ಭೂಮಿಯನ್ನು ತೆಗೆದುಕೊಂಡು ಕೃಷಿ ಮಾಡುವವನು. ಈ ಪದಗಳಲ್ಲಿಯೇ ವರ್ಗಭೇದ ಮತ್ತು ಅವಲಂಬಿತ್ವ ಗೋಚರಿಸುತ್ತದೆ. ಮಧ್ಯಕಾಲೀನ ಭಾರತದಲ್ಲಿ ಸುಲ್ತಾನರು ಮತ್ತು ಮೊಘಲರ ಕಾಲಕ್ಕೆ ತೆರಿಗೆಯ ಪ್ರಮಾಣವು ಬೆಳೆಯ ಅರ್ಧದಷ್ಟು (1/2) ಏರಿಕೆಯಾಯಿತು. ಅಲ್ಲಾವುದ್ದೀನ್ ಖಿಲ್ಜಿಯಂತಹ ಆಡಳಿತಗಾರರು ಮಧ್ಯವರ್ತಿಗಳನ್ನು ಹತ್ತಿಕ್ಕಲು ಪ್ರಯತ್ನಿಸಿದರೂ, ಅಂತಿಮವಾಗಿ ಹೊರೆ ಬಿದ್ದಿದ್ದು ಸಾಮಾನ್ಯ ರೈತನ ಮೇಲೆ. [3] ರಣಜಿತ್ ಗುಹಾ ಅವರಂತಹ ಸಭಾಲ್ಟರನ್ ಇತಿಹಾಸಕಾರರು ಗುರುತಿಸುವಂತೆ, ಈ ಕಾಲದ ದಂಗೆಗಳು ಕೇವಲ ಹಸಿವಿನ ಕೂಗಲ್ಲ, ಬದಲಿಗೆ ಅಸ್ತಿತ್ವಕ್ಕಾಗಿ ನಡೆದ ಪ್ರತಿರೋಧಗಳಾಗಿದ್ದವು.

ವಸಾಹತುಶಾಹಿ ಕಾಲಘಟ್ಟವು ರೈತರ ಬದುಕಿನಲ್ಲಿ ಕರಾಳ ಅಧ್ಯಾಯವನ್ನು ಬರೆಯಿತು. ಬ್ರಿಟಿಷ್ ಕಾಲಘಟ್ಟದಲ್ಲಿ, ರೈತನಿಗೆ ನೀಡಲಾದ ಹೆಸರುಗಳು ಮತ್ತು ಅವನ ಸ್ಥಿತಿ ಹೊಸ ರೂಪ ಪಡೆದುಕೊಂಡವು. ಬ್ರಿಟಿಷರು "ರೈಯತ್" "ಟೆನಂಟ್", "ಕಲ್ಟಿವೇಟರ್", "ಪೀಸಂಟ್" ಎಂಬ ಪದಗಳನ್ನು ಬಳಕೆ ಮಾಡಿದರು. ಬ್ರಿಟಿಷರು ಪರಿಚಯಿಸಿದ ಜಮೀನ್ದಾರಿ, ರೈತವಾರಿ ಮತ್ತು ಮಹಲ್ವಾರಿ ಪದ್ಧತಿಗಳು ರೈತನನ್ನು ಸಾಲದ ಸುಳಿಗೆ ದೂಡಿದವು. ಕೃಷಿಯ ವಾಣಿಜ್ಯೀಕರಣದಿಂದಾಗಿ ಆಹಾರ ಧಾನ್ಯಗಳ ಬದಲಿಗೆ ಅಫೀಮು, ಹತ್ತಿ, ನೀಲಿ (Indigo) ಬೆಳೆಯಲು ರೈತರನ್ನು ಒತ್ತಾಯಿಸಲಾಯಿತು. ಇದು ಭೀಕರ ಕ್ಷಾಮಗಳಿಗೆ ಕಾರಣವಾಯಿತು.

ಬ್ರಿಟಿಷ್ ಕಂದಾಯ ನೀತಿಯು ರೈತನನ್ನು ಭೂಮಿಯಿಂದ ಒಕ್ಕಲೆಬ್ಬಿಸಿತು, ಇದರಿಂದಾಗಿ ರೈತ ವರ್ಗವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸಂಪೂರ್ಣವಾಗಿ 'ಸಭಾಲ್ಟರನ್' ಸ್ಥಿತಿಗೆ ತಲುಪಿತು. ನಗದು ಬೆಳೆಗಳ

---

[2] Sharma, R. S. (2005). India's Ancient Past. Oxford University Press

[3] Chandra, S. (1997). Medieval India: From Sultanat To The Mughals (Vol. 1). Har-Anand Publication

ಬೆಳವಣಿಗೆಗೆ ಒತ್ತಡ ನೀಡುವುದರಿಂದ ರೈತರ ಆಹಾರ ಭದ್ರತೆ ಕುಸಿಯಿತು. ಸಾಲದ ಚಕ್ರದಲ್ಲಿ ಸಿಲುಕಿದ ರೈತರು ತಮ್ಮ ಭೂಮಿಯನ್ನು ಕಳೆದುಕೊಳ್ಳುವ ಪರಿಸ್ಥಿತಿಗೆ ತಲುಪಿದರು. ರಣಜಿತ್ ಗುಹಾ ಅವರ ಅಭಿಪ್ರಾಯದಲ್ಲಿ ರೈತರ ಬಂಡಾಯಗಳು—ಸಂಘಟಿತವಾಗಲಿ ಅಥವಾ ಸ್ವಯಂಸ್ಫೂರ್ತಿಯಾಗಲಿ—ಅವರ ದಮನಕ್ಕೆ ವಿರುದ್ಧದ ಪ್ರತಿರೋಧವಾಗಿದ್ದವು. ಈ ಹಂತದಲ್ಲಿ ನಡೆದ ನೀಲಿ ದಂಗೆ, ಪಬ್ನಾ ದಂಗೆಗಳು ರೈತನ ಪ್ರಜ್ಞೆಯ ಸಂಕೇತಗಳಾಗಿವೆ. ಆದರೆ ಈ ಪ್ರತಿರೋಧಗಳು ಪ್ರಧಾನ ಇತಿಹಾಸದಲ್ಲಿ ಸರಿಯಾದ ಸ್ಥಾನ ಪಡೆಯಲಿಲ್ಲ, ಇದರಿಂದ ರೈತರ ಧ್ವನಿ ಮೌನಗೊಳಿಸಲ್ಪಟ್ಟಿತು

ಆಧುನಿಕ ಅಥವಾ ಸ್ವತಂತ್ರ ಭಾರತದಲ್ಲಿ ಜಮೀನ್ದಾರಿ ಪದ್ಧತಿಯ ನಿರ್ಮೂಲನೆಯಾದರೂ, ರೈತರ ಸ್ಥಿತಿಯಲ್ಲಿ ಆಶಾದಾಯಕ ಬದಲಾವಣೆಗಳು ತೃಪ್ತಿದಾಯಕವಾಗಿಲ್ಲ. ಇಂದಿನ ಜಾಗತೀಕರಣದ ಯುಗದಲ್ಲಿ ಸರ್ಕಾರಗಳ ನವ–ಉದಾರವಾದಿ ನೀತಿಗಳು ರೈತರನ್ನು ಮತ್ತಷ್ಟು ದಮನ ಮಾಡುತ್ತಿವೆ ಎಂಬುದು ಇತಿಹಾಸಕಾರರ ವಿಶ್ಲೇಷಣೆ. ಕನಿಷ್ಠ ಬೆಂಬಲ ಬೆಲೆಯ ಕೊರತೆ, ಕೃಷಿ ಮಾರುಕಟ್ಟೆಯಲ್ಲಿ ಕಾರ್ಪೊರೇಟ್ ಸಂಸ್ಥೆಗಳ ಹಸ್ತಕ್ಷೇಪ ಮತ್ತು ರಸಗೊಬ್ಬರಗಳ ಬೆಲೆ ಏರಿಕೆ ರೈತರನ್ನು ಆತ್ಮಹತ್ಯೆಯಂತಹ ತೀವ್ರ ನಿರ್ಧಾರಗಳಿಗೆ ಪ್ರೇರೇಪಿಸುತ್ತಿವೆ.[4] ಆಧುನಿಕ ವ್ಯವಸ್ಥೆಯು ಅಭಿವೃದ್ಧಿಯ ಹೆಸರಿನಲ್ಲಿ ಫಲವತ್ತಾದ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಮೂಲಕ ರೈತನನ್ನು ಸ್ವಂತ ನೆಲದಲ್ಲೇ ಅನಾಥನನ್ನಾಗಿ ಮಾಡುತ್ತಿದೆ. ಈ ಜಟಿಲ ಸಮಸ್ಯೆಗೆ ಪರಿಹಾರೋಪಾಯಗಳನ್ನು ಹುಡುಕುವಾಗ ಇತಿಹಾಸಕಾರರು ಮತ್ತು ಆರ್ಥಿಕ ತಜ್ಞರು ಕೆಲವು ಪ್ರಮುಖ ಸಲಹೆಗಳನ್ನು ನೀಡುತ್ತಾರೆ. ಮೊದಲನೆಯದಾಗಿ, ಕೃಷಿ ನೀತಿಗಳು 'ಮೇಲಿಂದ ಕೆಳಕ್ಕೆ' (Top-down) ಇರದೆ, ತಳಮಟ್ಟದ ರೈತರ ಸಹಭಾಗಿತ್ವದೊಂದಿಗೆ ರೂಪಿತವಾಗಬೇಕು. ರೈತರಿಗೆ ಕೇವಲ ಸಬ್ಸಿಡಿ ನೀಡುವ ಬದಲಿಗೆ, ಬೆಳೆದ ಬೆಳೆಗೆ ವೈಜ್ಞಾನಿಕವಾಗಿ ಲೆಕ್ಕಾಚಾರ ಮಾಡಿದ ಲಾಭದಾಯಕ ಬೆಲೆ ಸಿಗುವಂತಾಗಬೇಕು. ಎಂ.ಎಸ್. ಸ್ವಾಮಿನಾಥನ್ ವರದಿಯ ಶಿಫಾರಸುಗಳನ್ನು ಜಾರಿಗೆ ತರುವುದು ಇಂದಿನ ತುರ್ತು ಅಗತ್ಯವಾಗಿದೆ. ಕೃಷಿ ಆಧಾರಿತ ಸಣ್ಣ ಕೈಗಾರಿಕೆಗಳ ಸ್ಥಾಪನೆ ಮತ್ತು ಸಹಕಾರಿ ಕೃಷಿ ಪದ್ಧತಿಗೆ ಉತ್ತೇಜನ ನೀಡುವ ಮೂಲಕ ರೈತರ ಮೇಲಿನ ಆರ್ಥಿಕ ಒತ್ತಡವನ್ನು ಕಡಿಮೆ ಮಾಡಬಹುದು. ಸಾರಾಂಶದಲ್ಲಿ ಹೇಳುವುದಾದರೆ, ರೈತ ಕೇವಲ ಚರಿತ್ರೆಯ ಒಂದು ಅಂಕಿ–ಅಂಶವಲ್ಲ; ಆತ ವ್ಯವಸ್ಥೆಯ ಬೆನ್ನೆಲುಬು. ಪ್ರಾಚೀನ ಕಾಲದ ಸಾಮಂತಶಾಹಿಯಿಂದ ಹಿಡಿದು ಇಂದಿನ ಕಾರ್ಪೊರೇಟ್ ಶಾಹಿಯವರೆಗೆ ರೈತ ವರ್ಗವು ಸತತವಾಗಿ ಅಧೀನ ಸ್ಥಿತಿಯಲ್ಲೇ ಉಳಿದಿರುವುದು ಪ್ರಜಾಪ್ರಭುತ್ವದ ವಿಪರ್ಯಾಸ.[5] ಇತಿಹಾಸದ ತಪ್ಪುಗಳಿಂದ ಪಾಠ ಕಲಿತು, ರೈತನನ್ನು ಸಂಕಷ್ಟದಿಂದ ಮುಕ್ತಗೊಳಿಸಿದಾಗ ಮಾತ್ರ ಒಂದು ಸಮಾಜವು ನಿಜವಾದ ಅರ್ಥದಲ್ಲಿ ಪ್ರಗತಿ ಹೊಂದಲು ಸಾಧ್ಯ. ರೈತನನ್ನು ಸಬಾಲ್ಟರನ್ ಹಂತದಿಂದ ಗೌರವಾನ್ವಿತ ನಾಗರಿಕ ಹಂತಕ್ಕೆ ತರುವುದು ಕೇವಲ ಸರ್ಕಾರದ ಜವಾಬ್ದಾರಿಯಲ್ಲ, ಅದು ಸಮೂಹ ಸಮಾಜದ ಕರ್ತವ್ಯವೂ ಆಗಿದೆ. ಸಬಾಲ್ಟರನ್ ಎಂಬ ಕಲ್ಪನೆ ಸಮಾಜದ ಅಧಿಕಾರ ರಚನೆಯ ಹೊರವಲಯದಲ್ಲಿ ಉಳಿದಿರುವ, ರಾಜಕೀಯ–ಆರ್ಥಿಕ ನಿರ್ಧಾರಗಳಲ್ಲಿ ತಮ್ಮ ಧ್ವನಿಯನ್ನು ವ್ಯಕ್ತಪಡಿಸಲು

[4] ದೊರೆಸ್ವಾಮಿ. ಎಚ್.ಎಸ್. (2010). *ರೈತ ಬದುಕು ಮತ್ತು ಹೋರಾಟ.* ಸಾಹಿತ್ಯ ಪ್ರಕಾಶನ.

[5] Jalan, B. (1992). The Indian Economy: Problems and Prospects. Penguin.

ಸಾಧ್ಯವಾಗದ ವರ್ಗದ ಸ್ಥಿತಿಯನ್ನು ಸೂಚಿಸುತ್ತದೆ. ಈ ಪರಿಕಲ್ಪನೆಯನ್ನು ಚಿಂತಕ ಆಂಟೋನಿಯೋ ಗ್ರಾಂಸಿ ವಿವರಿಸಿದಾಗ, ಸಮಾಜದ ಪ್ರಭುತ್ವಶಾಲಿ ವರ್ಗಗಳು ಹೇಗೆ ತಮ್ಮ ಸಾಂಸ್ಕೃತಿಕ ಮತ್ತು ಆರ್ಥಿಕ ನಿಯಂತ್ರಣದ ಮೂಲಕ ಇತರ ವರ್ಗಗಳನ್ನು ಅಧೀನಗೊಳಿಸುತ್ತವೆ ಎಂಬುದನ್ನು ತೋರಿಸಿದರು. ಭಾರತೀಯ ಇತಿಹಾಸದಲ್ಲಿ ರೈತರು ಈ ಸಭಾಲ್ಟರನ್ ವರ್ಗಕ್ಕೆ ಸೇರುತ್ತಾರೆ ಎಂಬ ವಿಚಾರವನ್ನು ರಣಜಿತ್ ಗುಹಾ ಮತ್ತು ಅವರ ಸಹಚರರು ವಿಶೇಷವಾಗಿ ಒತ್ತಿ ಹೇಳಿದ್ದಾರೆ.

ಭಾರತದಂತಹ ಸಾಂಪ್ರದಾಯಿಕ ಕೃಷಿ ಪ್ರಧಾನ ದೇಶವು ಇಂದು ಜಾಗತೀಕರಣ ಮತ್ತು ಉದ್ಯಮಶೀಲತೆಯ ಪ್ರಭಾವದಿಂದಾಗಿ ಉದ್ಯಮ ಪ್ರಧಾನ ದೇಶವಾಗಿ ರೂಪಾಂತರಗೊಳ್ಳುತ್ತಿದೆ. ಈ ಸ್ಥಿತ್ಯಂತರವು ಕೇವಲ ಆರ್ಥಿಕ ಬದಲಾವಣೆಯಲ್ಲ, ಬದಲಿಗೆ ಶತಶತಮಾನಗಳಿಂದ ಬೆಳೆದುಬಂದ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಟ್ಟಿನ ಪಲ್ಲಟವಾಗಿದೆ. ಒಮ್ಮೆ 'ಆಹಾರ ಕೇಂದ್ರಿತ'ವಾಗಿದ್ದ ಕೃಷಿ ಪದ್ಧತಿಯು ಇಂದು 'ಮಾರುಕಟ್ಟೆ ಕೇಂದ್ರಿತ' ವಾಣಿಜ್ಯ ಪ್ರಕ್ರಿಯೆಯಾಗಿ ಬದಲಾಗಿದೆ. ಈ ಮಹತ್ತರ ಬದಲಾವಣೆಯ ಸುಳಿಯಲ್ಲಿ ಸಿಲುಕಿರುವ ರೈತನ ಅಸ್ತಿತ್ವವು ಇಂದು ಅತಂತ್ರ ಸ್ಥಿತಿಯಲ್ಲಿದೆ. ಮಣ್ಣಿನೊಂದಿಗಿನ ಭಾವನಾತ್ಮಕ ಸಂಬಂಧವನ್ನು ಕಳೆದುಕೊಂಡು, ಕೇವಲ ಒಬ್ಬ 'ಉತ್ಪಾದಕ'ನಾಗಿ ಅಥವಾ ಮಾರುಕಟ್ಟೆಯ ಒಂದು ಸಣ್ಣ ಕೊಂಡಿಯಾಗಿ ರೈತ ಗುರುತಿಸಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿದೆ.[6] ಕೃಷಿಯು ಉದ್ಯಮವಾಗಿ ರೂಪಾಂತರಗೊಂಡಾಗ, ಕೃಷಿ ಭೂಮಿಯು ಪವಿತ್ರ ನೆಲೆಯಾಗಿ ಉಳಿಯದೆ ಒಂದು 'ರಿಯಲ್ ಎಸ್ಟೇಟ್' ವಸ್ತುವಾಗಿ ಮಾರ್ಪಟ್ಟಿದೆ. ಕೈಗಾರಿಕಾ ಕಾರಿಡಾರ್ಗಳು, ಹೆದ್ದಾರಿಗಳು ಮತ್ತು ತಾಂತ್ರಿಕ ಪಾರ್ಕ್ಗಳ ನಿರ್ಮಾಣಕ್ಕಾಗಿ ಫಲವತ್ತಾದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ಇದರಿಂದಾಗಿ ಸಣ್ಣ ಮತ್ತು ಅತಿಸಣ್ಣ ರೈತರು ತಮ್ಮ ಭೂಮಿಯಿಂದ ಒಕ್ಕಲೆಬ್ಬಿಸಲ್ಪಟ್ಟು, ನಗರಗಳತ್ತ ವಲಸೆ ಹೋಗಿ ಅಸಂಘಟಿತ ವಲಯದ ಕಾರ್ಮಿಕರಾಗಿ ಬದಲಾಗುತ್ತಿದ್ದಾರೆ. ಈ ಪ್ರಕ್ರಿಯೆಯು ರೈತನ ಮೂಲ ಅಸ್ತಿತ್ವವನ್ನೇ ಪ್ರಶ್ನಿಸುತ್ತಿದೆ. ಹಿಂದೆ ಹಸಿವು ನೀಗಿಸುವ ಉದ್ದೇಶದಿಂದ ಬೆಳೆಯುತ್ತಿದ್ದ ಧಾನ್ಯಗಳ ಜಾಗದಲ್ಲಿ ಇಂದು ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ಅತಿ ಹೆಚ್ಚು ಬಂಡವಾಳ ಬೇಡುವ ವಾಣಿಜ್ಯ ಬೆಳೆಗಳು ಬಂದಿವೆ. ಇದು ರೈತನನ್ನು ಪ್ರಕೃತಿಯ ಮೇಲಲ್ಲದೆ, ಬಹುರಾಷ್ಟ್ರೀಯ ಕಂಪನಿಗಳ ಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳ ಮೇಲೆ ಅವಲಂಬಿತನಾಗುವಂತೆ ಮಾಡಿದೆ.

ಈ ಬದಲಾದ ವ್ಯವಸ್ಥೆಯಲ್ಲಿ ರೈತ ಎದುರಿಸುತ್ತಿರುವ ಬಿಕ್ಕಟ್ಟುಗಳು ಬಹುಮುಖಿಯಾದವು. ಮೊದಲನೆಯದಾಗಿ, ಬಂಡವಾಳದ ಬಿಕ್ಕಟ್ಟು ರೈತನನ್ನು ತೀವ್ರವಾಗಿ ಕಾಡುತ್ತಿದೆ. ವಾಣಿಜ್ಯ ಬೆಳೆಗಳಿಗಾಗಿ ತಗಲುವ ಹೆಚ್ಚಿನ ವೆಚ್ಚವನ್ನು ಭರಿಸಲು ರೈತರು ಬ್ಯಾಂಕುಗಳಿಗಿಂತ ಹೆಚ್ಚಾಗಿ ಖಾಸಗಿ ಲೇವಾದೇವಿದಾರರನ್ನು ಅವಲಂಬಿಸುತ್ತಿದ್ದಾರೆ. ಬೆಳೆ ವಿಫಲವಾದಾಗ ಅಥವಾ ಮಾರುಕಟ್ಟೆಯಲ್ಲಿ ಬೆಲೆ ಕುಸಿದಾಗ ಈ ಸಾಲದ ಹೊರೆ 'ಸಾಲಬಾಧೆ'ಯಾಗಿ ಪರಿಣಮಿಸಿ ರೈತರ ಆತ್ಮಹತ್ಯೆಗೆ ಪ್ರಮುಖ ಕಾರಣವಾಗುತ್ತಿದೆ. ಎರಡನೆಯದಾಗಿ, ಮಾರುಕಟ್ಟೆಯ ಅಸ್ಥಿರತೆ ಮತ್ತು ಮಧ್ಯವರ್ತಿಗಳ ಹಾವಳಿಯಿಂದಾಗಿ ರೈತನಿಗೆ ತಾನು ಬೆಳೆದ ಬೆಳೆಗೆ

[6] Reddy, K. S., & Mishra, P. S. (2009). Farmers' Suicide In India: Dimensions And Perspectives. New Delhi.

ನ್ಯಾಯಯುತ ಬೆಲೆ ಸಿಗುತ್ತಿಲ್ಲ. ಮಾರುಕಟ್ಟೆ ಕೇಂದ್ರಿತ ಕೃಷಿಯಲ್ಲಿ ಬೆಲೆಯನ್ನು ನಿರ್ಧರಿಸುವ ಶಕ್ತಿ ರೈತನ ಕೈಯಲ್ಲಿಲ್ಲದೆ, ದಲ್ಲಾಳಿಗಳು ಮತ್ತು ಕಾರ್ಪೊರೇಟ್ ಸಂಸ್ಥೆಗಳ ಕೈಯಲ್ಲಿದೆ.ಪರಿಸರ ಬಿಕ್ಕಟ್ಟು ಕೂಡ ರೈತನ ಅಸ್ತಿತ್ವಕ್ಕೆ ಸಂಚಕಾರ ತಂದಿದೆ. ಮಾರುಕಟ್ಟೆಯ ಪೈಪೋಟಿಗೆ ಬಿದ್ದು ಅತಿಯಾದ ರಾಸಾಯನಿಕ ಬಳಕೆಯಿಂದ ಮಣ್ಣಿನ ಫಲವತ್ತತೆ ನಾಶವಾಗುತ್ತಿದೆ ಮತ್ತು ಅಂತರ್ಜಲ ಮಟ್ಟ ಕುಸಿಯುತ್ತಿದೆ. ಇದು ಕೃಷಿಯನ್ನು ಅಸ್ಥಿರಗೊಳಿಸುವುದಲ್ಲದೆ, ರೈತನ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತಿದೆ. ಜೊತೆಗೆ, ಹವಾಮಾನ ಬದಲಾವಣೆಯ ಅನಿಶ್ಚಿತತೆಯು ರೈತನ ಪಾಲಿಗೆ ಜೂಜಾಟದಂತಾಗಿದೆ. ಉದ್ಯಮ ಪ್ರಧಾನ ದೇಶದಲ್ಲಿ ಸರ್ಕಾರಗಳು ಕಾರ್ಪೊರೇಟ್ ವಲಯಕ್ಕೆ ನೀಡುವ ರಿಯಾಯಿತಿ ಮತ್ತು ಪ್ರೋತ್ಸಾಹವನ್ನು ಕೃಷಿ ಕ್ಷೇತ್ರಕ್ಕೆ ನೀಡಲು ಹಿಂಜರಿಯುತ್ತಿರುವುದು ರೈತನ ಅಸಹಾಯಕತೆಯನ್ನು ಹೆಚ್ಚಿಸಿದೆ. ಕೃಷಿಯು ಲಾಭದಾಯಕವಲ್ಲದ ವೃತ್ತಿಯಾಗಿ ಮಾರ್ಪಟ್ಟಿರುವುದರಿಂದ ಇಂದಿನ ಯುವ ಪೀಳಿಗೆಯು ಕೃಷಿಯಿಂದ ದೂರ ಸರಿಯುತ್ತಿರುವುದು ಭವಿಷ್ಯದ ಆಹಾರ ಭದ್ರತೆಗೆ ದೊಡ್ಡ ಸವಾಲಾಗಿದೆ. ಈ ಎಲ್ಲಾ ಬಿಕ್ಕಟ್ಟುಗಳ ನಡುವೆಯೂ ರೈತ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಡುತ್ತಿದ್ದಾನೆ. ಈ ಸಮಸ್ಯೆಗೆ ಪರಿಹಾರವು ಕೇವಲ ಸಾಲಮನ್ನಾದಂತಹ ತಾತ್ಕಾಲಿಕ ಕ್ರಮಗಳಲ್ಲಿದೆ ಎಂದು ಭಾವಿಸುವುದು ತಪ್ಪು. ಬದಲಿಗೆ, ಕೃಷಿಯನ್ನು ಉದ್ಯಮದ ಮಾದರಿಯಲ್ಲೇ ಅಭಿವೃದ್ಧಿಪಡಿಸುತ್ತಾ, ಅದರ ಲಾಭಾಂಶವು ನೇರವಾಗಿ ರೈತನಿಗೆ ತಲುಪುವಂತಹ ವ್ಯವಸ್ಥೆ ನಿರ್ಮಾಣವಾಗಬೇಕಿದೆ. ರೈತ ಉತ್ಪಾದಕ ಸಂಘಗಳ ಬಲವರ್ಧನೆ, ವೈಜ್ಞಾನಿಕ ಶೇಖರಣಾ ವ್ಯವಸ್ಥೆ, ಮೌಲ್ಯವರ್ಧನೆ ಮತ್ತು ನೇರ ಮಾರುಕಟ್ಟೆ ಸೌಲಭ್ಯಗಳು ರೈತನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬಹುದು.[7] ಕೃಷಿ ಪ್ರಧಾನತೆಯಿಂದ ಉದ್ಯಮ ಪ್ರಧಾನತೆಗೆ ಬದಲಾಗುವ ಈ ಹಂತದಲ್ಲಿ, ರೈತ ಕೇವಲ ಶ್ರಮಿಕನಾಗಿ ಉಳಿಯದೆ ಒಬ್ಬ ಗೌರವಾನ್ವಿತ ಉದ್ದಿಮೆದಾರನಾಗಿ ಬೆಳೆಯಲು ಬೇಕಾದ ಪೂರಕ ನೀತಿಗಳನ್ನು ರೂಪಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ರೈತ ಬದುಕಿದರೆ ಮಾತ್ರ ಈ ದೇಶದ ಆರ್ಥಿಕ ಮತ್ತು ಆಹಾರ ಭದ್ರತೆ ಭದ್ರವಾಗಿರಲು ಸಾಧ್ಯ. ಕೃಷಿ ಪ್ರಧಾನ ಸಮಾಜದಿಂದ ಉದ್ಯಮ ಪ್ರಧಾನ ಸಮಾಜದತ್ತ ನಡೆದಿರುವ ರೂಪಾಂತರವು ಕೇವಲ ಆರ್ಥಿಕ ಬದಲಾವಣೆಯಲ್ಲ; ಅದು ಬದುಕಿನ ಅರ್ಥ, ಉತ್ಪಾದನೆಯ ಉದ್ದೇಶ, ಮತ್ತು ರೈತನ ಅಸ್ತಿತ್ವವನ್ನೇ ಮರುಸಂರಚಿಸಿದ ಒಂದು ಆಳವಾದ ಪರಿವರ್ತನೆ. ಒಂದು ಕಾಲದಲ್ಲಿ ಆಹಾರ ಉತ್ಪಾದನೆ ಜೀವನಾಧಾರವಾಗಿದ್ದರೆ, ಇಂದು ಅದು ಮಾರುಕಟ್ಟೆಯ ಲಾಜಿಕ್ಗೆ ಒಳಪಟ್ಟ ವ್ಯವಹಾರಿಕ ಕ್ರಿಯೆಯಾಗಿದೆ. ಈ ಬದಲಾವಣೆಯನ್ನು ಅರ್ಥಮಾಡಿಕೊಳ್ಳಲು ಕಾರ್ಲ್ ಮಾರ್ಕ್ಸ್ ಅವರ 'ವಸ್ತುವಾದ' (commodification) ಪರಿಕಲ್ಪನೆ ಸಹಾಯಕವಾಗುತ್ತದೆ—ಉತ್ಪಾದನೆಯು ಜೀವನೋಪಾಯದಿಂದ ಲಾಭೋದ್ದೇಶದ ವಸ್ತುವಾಗಿ ಪರಿವರ್ತಿತವಾಗುವ ಪ್ರಕ್ರಿಯೆ.

ಇದೇ ಸಂದರ್ಭದಲ್ಲಿ ಎಂ.ಎನ್.ಶ್ರೀನಿವಾಸ್ ಉಲ್ಲೇಖಿಸುವ ಸಾಮಾಜಿಕ ರೂಪಾಂತರಗಳು ಗ್ರಾಮೀಣ ಭಾರತದ ಮೂಲಭೂತ ಬದಲಾವಣೆಯನ್ನು ತೋರಿಸುತ್ತವೆ[8]. ಆಹಾರ ಕೇಂದ್ರಿತ ಕೃಷಿಯಲ್ಲಿ ರೈತನ ಪಾತ್ರವು "ಉತ್ಪಾದಕ–ಪಾಲಕ" ಎಂಬುದು. ಅವನು ಭೂಮಿಯೊಂದಿಗೆ ಜೀವಂತ ಸಂಬಂಧ ಹೊಂದಿದ್ದ; ಬೆಳೆ

[7] Joshi, V. (2016). India's Long Road: The Search For Prosperity. Oxford University Press
[8] Srinivas, M. N. (1966). Social Change In Modern India.University Of California Press.

ಉತ್ಪಾದನೆ ಕೇವಲ ಲಾಭಕ್ಕಾಗಿ ಅಲ್ಲ, ಸಮುದಾಯದ ಬದುಕಿಗಾಗಿ. ಆದರೆ ಮಾರುಕಟ್ಟೆ ಕೇಂದ್ರಿತ ಕೃಷಿಯಲ್ಲಿ ರೈತನು "ಉತ್ಪಾದಕ–ವ್ಯಾಪಾರಿ"ಯಾಗಿ ಬದಲಾಗಿದೆ. ಬೆಳೆ ಯಾವುದು ಬೆಳೆಸಬೇಕು ಎಂಬುದನ್ನು ಅವನ ಅಗತ್ಯಗಳು ನಿರ್ಧರಿಸುವುದಿಲ್ಲ; ಬದಲಿಗೆ ಮಾರುಕಟ್ಟೆಯ ಬೆಲೆ, ರಫ್ತು ಬೇಡಿಕೆ, ಮತ್ತು ಕಾರ್ಪೊರೇಟ್ ಪ್ರಭಾವಗಳು ನಿರ್ಧರಿಸುತ್ತವೆ. ಈ ಬದಲಾವಣೆಯನ್ನು ಉತ್ಸಾ ಪಾಟ್ನಯಕ್ ತೀವ್ರವಾಗಿ ವಿಮರ್ಶಿಸುತ್ತಾ, ಇದು ರೈತನನ್ನು ಜಾಗತಿಕ ಮಾರುಕಟ್ಟೆಯ ಅಸ್ಥಿರತೆಗೆ ನೇರವಾಗಿ ಬಂಧಿಸುತ್ತದೆ ಎಂದು ಹೇಳುತ್ತಾರೆ.[9]

ಈ ಸಂದರ್ಭದಲ್ಲಿ ರೈತನ ಅಸ್ತಿತ್ವವು ಗೊಂದಲದ ಸ್ಥಿತಿಗೆ ತಲುಪಿದೆ. ಅವನು ಇನ್ನು ಸ್ವತಂತ್ರ ಉತ್ಪಾದಕನಲ್ಲ; ಆದರೆ ಸಂಪೂರ್ಣ ಉದ್ಯಮಿ ಆಗಲು ಬೇಕಾದ ಮೂಲಸೌಕರ್ಯವೂ ಅವನ ಬಳಿ ಇಲ್ಲ. ಮಧ್ಯದಲ್ಲಿರುವ ಈ "ಅಸ್ಥಿರ ಅಸ್ತಿತ್ವ"ವೇ ಇಂದಿನ ರೈತನ ಮುಖ್ಯ ವೈಶಿಷ್ಟ್ಯ ರಣಜಿತ್ ಗುಹಾ ಉತ್ಸಾ ಪಾಟ್ನಯಕ್ ಅವರ ಸಭಾಲ್ಟರನ್ ಪರಿಕಲ್ಪನೆಯ ದೃಷ್ಟಿಯಿಂದ ನೋಡಿದರೆ, ರೈತನು ಇಂದಿಗೂ ಅಧಿಕಾರದ ಕೇಂದ್ರಗಳಿಂದ ದೂರವಿರುವ, ಆದರೆ ಅವುಗಳ ಪರಿಣಾಮಕ್ಕೆ ಗುರಿಯಾಗುವ ವರ್ಗವಾಗಿದೆ.

**ರೈತನ ಬಿಕ್ಕಟ್ಟುಗಳು ಬಹುಮಟ್ಟಿನವು.**

- ಆರ್ಥಿಕ ಬಿಕ್ಕಟ್ಟು—ಇನ್ಪುಟ್ ವೆಚ್ಚಗಳ ಏರಿಕೆ (ಬೀಜ, ರಸಗೊಬ್ಬರ, ಕೀಟನಾಶಕ) ಮತ್ತು ಉತ್ಪನ್ನದ ಬೆಲೆಯ ಅಸ್ಥಿರತೆ ರೈತನನ್ನು ಸಾಲದ ಬಲೆಗೆ ತಳ್ಳುತ್ತದೆ. ಬಿಪನ್ ಚಂದ್ರ ಅವರ ವಸಾಹತುಶಾಹಿ ಆರ್ಥಿಕ ವಿಶ್ಲೇಷಣೆಯಂತೆ, ಮಾರುಕಟ್ಟೆ ಆಧಾರಿತ ಕೃಷಿ ರೈತನನ್ನು ಹೊರಗಿನ ಶಕ್ತಿಗಳ ಮೇಲೆ ಅವಲಂಬಿತನನ್ನಾಗಿ ಮಾಡುತ್ತದೆ. ಈ ಸ್ಥಿತಿ ಇಂದಿಗೂ ಹೊಸ ರೂಪದಲ್ಲಿ ಮುಂದುವರಿದಿದೆ.
- ಸಾಮಾಜಿಕ ಬಿಕ್ಕಟ್ಟು—ಗ್ರಾಮೀಣ ಸಮುದಾಯದ ಬಲ ಕುಗ್ಗುತ್ತಿದೆ. ಕುಟುಂಬ ಆಧಾರಿತ ಕೃಷಿ ಕ್ರಮೇಣ ಕುಸಿಯುತ್ತಿದೆ; ಯುವಕರು ಕೃಷಿಯನ್ನು ತ್ಯಜಿಸಿ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ.
- ಪರಿಸರ ಬಿಕ್ಕಟ್ಟು—ಮೋನೋಕಲ್ಚರ್, ರಾಸಾಯನಿಕ ಕೃಷಿ, ನೀರಿನ ಅತಿಯಾದ ಬಳಕೆ ಮಣ್ಣಿನ ಉರ್ವರತೆಯನ್ನು ಹಾಳುಮಾಡುತ್ತಿವೆ. ಹವಾಮಾನ ಬದಲಾವಣೆ ಬೆಳೆ ಉತ್ಪಾದನೆಯನ್ನು ಇನ್ನಷ್ಟು ಅನಿಶ್ಚಿತಗೊಳಿಸಿದೆ.
- ಮಾನಸಿಕ ಮತ್ತು ಅಸ್ತಿತ್ವಾತ್ಮಕ ಬಿಕ್ಕಟ್ಟು—ರೈತನಿಗೆ ತನ್ನ ಶ್ರಮದ ಮೌಲ್ಯ ಕಾಣಿಸುತ್ತಿಲ್ಲ. ಅವನ ಪರಿಶ್ರಮ ಮಾರುಕಟ್ಟೆಯಲ್ಲಿ ಬೆಲೆ ಪಡೆಯದಾಗ, ಅವನು ತನ್ನದೇ ಅಸ್ತಿತ್ವವನ್ನು ಪ್ರಶ್ನಿಸಲು ಪ್ರಾರಂಭಿಸುತ್ತಾನೆ. ರೈತರ ಆತ್ಮಹತ್ಯೆಗಳು ಈ ಆಳವಾದ ಸಂಕಷ್ಟದ ದಾರುಣ ವ್ಯಕ್ತೀಕರಣ. ಅಮಾರ್ತ್ಯ ಸೇನ್ ಹೇಳುವಂತೆ, ಅಭಿವೃದ್ಧಿ ಎಂದರೆ ಕೇವಲ ಆರ್ಥಿಕ ಬೆಳವಣಿಗೆ ಅಲ್ಲ; ಅದು ಮಾನವ ಸಾಮರ್ಥ್ಯಗಳ ವಿಸ್ತರಣೆ. ಆದರೆ ರೈತನ ಜೀವನದಲ್ಲಿ ಈ ವಿಸ್ತರಣೆ ಕಾಣಿಸುವುದಿಲ್ಲ.[10]

ಇದರಿಂದ ಹೊರಬರಲು ಪರಿಹಾರಗಳು ಬಹುಮುಖವಾಗಿರಬೇಕು. ಮಾರುಕಟ್ಟೆ ನಿಯಂತ್ರಣ ಮತ್ತು ಕನಿಷ್ಠ ಬೆಲೆ ಭದ್ರತೆ ರೈತನಿಗೆ ಸ್ಥಿರ ಆದಾಯ ನೀಡಬಹುದು. ಸಹಕಾರಿ ಕೃಷಿ ಮತ್ತು ಸ್ಥಳೀಯ ಮಾರುಕಟ್ಟೆ

[9] Patnaik, U. (2018). The Agrarian Question In India. Tulika Books.
[10] Janaki Nair.,( 2011) Mysore: Modernity is, Misfortunes, (Peasant, Women, Workers, Rebels)

ವ್ಯವಸ್ಥೆಗಳು ರೈತನ ಸ್ವಾಯತ್ತತೆಯನ್ನು ಹೆಚ್ಚಿಸಬಹುದು. ಜೈವಿಕ ಕೃಷಿ ಮತ್ತು ಸುಸ್ಥಿರ ಯೋಜನೆಗಳು ಪರಿಸರ ಸಮತೋಲನವನ್ನು ಕಾಪಾಡಬಹುದು. ಮುಖ್ಯವಾಗಿ, ರೈತನನ್ನು ಕೇವಲ ಉತ್ಪಾದಕನಾಗಿ ಅಲ್ಲ, ಸಮಾಜದ ಆಹಾರ ಭದ್ರತೆಯ ಕೇಂದ್ರೀಯ ವ್ಯಕ್ತಿಯಾಗಿ ಗುರುತಿಸುವ ಮನೋಭಾವ ಅಗತ್ಯ. ಕೊನೆಯಲ್ಲಿ, ಈ ಪರಿವರ್ತನೆಯ ನಡುವೆ ರೈತನ ಅಸ್ತಿತ್ವವು ನಾಶವಾಗುತ್ತಿರುವುದಲ್ಲ; ಅದು ಹೊಸ ರೂಪದಲ್ಲಿ ಪುನರ್ವ್ಯಾಖ್ಯಾನಗೊಳ್ಳುತ್ತಿದೆ. ಆದರೆ ಈ ಪುನರ್ವ್ಯಾಖ್ಯಾನವು ನ್ಯಾಯಸಮ್ಮತವಾಗಿರಬೇಕಾದರೆ, ಆರ್ಥಿಕ ನೀತಿಗಳು, ಸಾಮಾಜಿಕ ದೃಷ್ಟಿಕೋನ ಮತ್ತು ಪರಿಸರದ ಜವಾಬ್ದಾರಿಗಳು ಸಮನ್ವಯವಾಗಿರಬೇಕು. ಇಲ್ಲವಾದರೆ, ಕೃಷಿಯಿಂದ ಉದ್ಯಮದತ್ತ ನಡೆದ ಈ ಯಾತ್ರೆ, ರೈತನನ್ನು ಪ್ರಗತಿಯ ಕೇಂದ್ರದಿಂದ ಅಂಚಿನತ್ತ ತಳ್ಳುವ ಅಪಾಯವನ್ನು ಹೊಂದಿದೆ. ಈ ಎಲ್ಲಾ ಹಂತಗಳನ್ನು ಒಟ್ಟಾಗಿ ನೋಡಿದಾಗ, ರೈತನಿಗೆ ನೀಡಲಾದ ಹೆಸರುಗಳು ಕಾಲಕ್ರಮೇಣ ಬದಲಾಗಿದ್ದರೂ, ಅವನ ಮೂಲಭೂತ ಸ್ಥಿತಿ—ಶ್ರಮದ ಮೇಲೆ ಅವಲಂಬಿತ ಜೀವನ, ಅಧಿಕಾರದಿಂದ ದೂರವಾಗಿರುವುದು, ಮತ್ತು ವಿವಿಧ ರೂಪಗಳಲ್ಲಿ ನಡೆಯುವ ಶೋಷಣೆ—ಸತತವಾಗಿ ಮುಂದುವರಿದಿರುವುದು ಸ್ಪಷ್ಟವಾಗುತ್ತದೆ.

"ಕರ್ಷಕ"ದಿಂದ "ರಯ್ಯತ್"ವರೆಗೆ, "ಟೆನಂಟ್"ದಿಂದ "ಅನ್ನದಾತ"ವರೆಗೆ—ಪದಗಳು ಬದಲಾಗಿವೆ, ಆದರೆ ಅವನ ಸಬಾಲ್ಟರನ್ ಅಸ್ತಿತ್ವವು ಸಂಪೂರ್ಣವಾಗಿ ಅಳಿದು ಹೋಗಿಲ್ಲ. ರೈತನ ಇತಿಹಾಸವನ್ನು ಈ ದೃಷ್ಟಿಕೋನದಲ್ಲಿ ಓದಿದಾಗ, ಅದು ಕೇವಲ ಕೃಷಿಯ ಇತಿಹಾಸವಲ್ಲ, ಅದು ಶಕ್ತಿಯ ಅಸಮಾನತೆ, ಶೋಷಣೆ ಮತ್ತು ನಿರಂತರ ಪ್ರತಿರೋಧದ ಕಥೆಯಾಗಿದೆ.

**ಪರಾಮರ್ಶನ ಗ್ರಂಥಗಳು**


- ಚಂದ್ರಶೇಖರ ಕಂಬಾರ. (2013). *ನಮ್ಮ ಕೃಷಿ ಸಂಸ್ಕೃತಿ.* ಅಂಕಿತ ಪ್ರಕಾಶನ.
- ದೊರೆಸ್ವಾಮಿ, ಎಚ್.ಎಸ್. (2010). *ರೈತ ಬದುಕು ಮತ್ತು ಹೋರಾಟ.* ಸಾಹಿತ್ಯ ಪ್ರಕಾಶನ.
- ನಟರಾಜು ಹುಳಿಯಾರ್. (2005). *ಗಾಂಧಿ ಮತ್ತು ಕರ್ನಾಟಕದ ರೈತ ಚಳುವಳಿ.* ಅಕ್ಷರ ಪ್ರಕಾಶನ.
- ನಾಗರಾಜ್, ಎಂ.ಜಿ. (2006). *ಕರ್ನಾಟಕ ರೈತ ಚಳುವಳಿ– ಸತ್ಯಾಗ್ರಹಗಳು, ಸಹಸ್ರಮಾನ ಸಂಪುಟ 02.* ಪ್ರಕಟಣೆ, ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ.
- ನಾಗರಾಜ್, ಎಂ.ಜಿ. (2006). *ಕರ್ನಾಟಕ ರೈತ ಚಳುವಳಿ– ಸತ್ಯಾಗ್ರಹಗಳು, ಸಹಸ್ರಮಾನ ಸಂಪುಟ 03.* ಪ್ರಕಟಣೆ, ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ
- ಪಾಟೀಲ್, ಎಸ್ ಸಿ. (2005). *ಕರ್ನಾಟಕದಲ್ಲಿ ಸಬಾಲ್ಟರನ್ ರಾಜಕಾರಣ ಅರಣ್ಯ ಸತ್ಯಾಗ್ರಹ ಮತ್ತು ಕರಾನಿರಾಕರಣೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ.
- ರಹಮತ್ ತರೀಕೆರೆ. (2012). *ಕರ್ನಾಟಕ ರೈತ ಚಳುವಳಿಗಳು.* ಪ್ರಸಾರಾಂಗ, ಹಂಪಿ ಕನ್ನಡ ವಿಶ್ವವಿದ್ಯಾಲಯ.

- ಶಾಂತ ರಾಮ ನಾಯಕ ಹಿರೇಗುತ್ತಿ. (1998). *ಸ್ವಾತಂತ್ರ್ಯ ಹೋರಾಟದಲ್ಲಿ ಅಂಕೋಲೆಯ ಪಾತ್ರ.* ರಾಘವೇಂದ್ರ ಪ್ರಕಾಶನ, ಅಂಕೋಲ.
- Eric Stokes (1978). *The peasant and the Raj: Studies in agrarian society and peasant rebellion*. Cambridge University Press.
- Gyanendra Pandey (1978). *Peasant and nationalism in colonial India*. Oxford University Press.
- Janaki Nair (2011). *Mysore: Modernity and its discontents (peasants, women, workers, rebels)*. Permanent Black.
- Meena Radhakrishna (2001). *Dishonoured by history: Criminal tribes and British colonial policy*. Orient Blackswan.
- Ranajit Guha (1983). *The elementary aspects of peasant insurgency in colonial India*. Oxford University Press.